ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ**106/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಭಾನುಪ್ರಕಾಶ್ | ಸಿ.ಡಬ್ಲ್ಯೂ - 10 |
| ತಂದೆಯ ಹೆಸರು | ಃ ರಂಗಪ್ಪಗೌಡ | ಪಿ.ಡಬ್ಲ್ಯೂ - 10 |
| ವಯಸ್ಸು | ಃ 35 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ಚಿಕ್ಕಗ್ರಹಾರ | |

ದಿನಾಂಕಃ **03/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಆರೋಪಿತರ ಪರಿಚಯ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 13/08/2025 ರಂದು ರಾತ್ರಿ 9.30 ರ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ 2 ನೇ ಆರೋಪಿಯು ನನಗೆ ಪೋನ್ ಮಾಡಿ ನಮ್ಮ ಮನೆಯಲ್ಲಿರುವ ಗ್ಯಾಸ್ ಸಿಲಿಂಡರ್ ಮತ್ತು ಸೋಲಾರ್ ಪ್ಯಾನಲ್ ಅನ್ನು ಮಾರಾಟ ಮಾಡುತ್ತೇವೆ, ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದರು ಅದಕ್ಕೆ ನಾನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದು, ಆದರೂ ಸಹ ಆರೋಪಿತರು ಪದೇ ಪದೇ ಪೋನ್ ಮಾಡಿ ಗ್ಯಾಸ್ ಸಿಲಿಂಡರ್ ಮತ್ತು ಸೋಲಾರ್ ಪ್ಯಾನಲ್ ಅನ್ನು ತೆಗೆದುಕೊಂಡು ರೂ.1000/- ಹಣ ಕೊಡುವಂತೆ ಹಾಗೂ ಒಂದು ವಾರದಲ್ಲಿ ಹಣ ಕೊಟ್ಟು ವಸ್ತುಗಳನ್ನು ವಾಪಾಸ್ಸು ಪಡೆದುಕೊಳ್ಳುತ್ತೇವೆ ಎಂದು ತಿಳಿಸಿದರು ಎಂದರೆ ಸರಿಯಲ್ಲ.

ದಿಃ 15/08/2025 ರಂದು ರಾತ್ರಿ ವೇಳೆ ತಾವು ಗಡಿಗೇಶ್ವರದಲ್ಲಿದ್ದಾಗ ಚಿಕ್ಕಗ್ರಹಾರದ ವಾಸಿ ಅನಿಲ್ ಕುಮಾರ್ ರವರ ಮನೆಯಲ್ಲಿ ಕಳ್ಳತನ ಆಗಿದ್ದು, ಯಾರೋ ಕಳ್ಳರು ಅನಿಲ್ ಕುಮಾರ್ ರವರ ಮನೆಯ ಬೀಗವನ್ನು ಒಡೆದು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ನನಗೆ ಮಾರಾಟ ಮಾಡಿದ ಮಹೇಶ ಮತ್ತು ದಿನೇಶ ರವರು ಸಹ

ಊರಿನಲ್ಲಿ ಕಾಣುತ್ತಿಲ್ಲ ಅವರು ಮದ್ಯವ್ಯಸನಿಗಳಾಗಿ ಅನಿಲ್ ಕುಮಾರ್ ರವರ ಮನೆಯಲ್ಲಿದ್ದ ವಸ್ತುಗಳನ್ನು ಕಳುವು ಮಾಡಿರುವ ಬಗ್ಗೆ ಜನ ಮಾತನಾಡುತ್ತಿದ್ದು ಆ ಸಂಬಂದ ಅನಿಲ್ ಕುಮಾರ್ ರವರು ಎನ್ ಆರ್ ಪುರ ಪೊಲೀಸ್ ಠಾಣೆಗೆ ದಿಃ 16/08/2025 ರಂದು ದೂರನ್ನು ನೀಡಿದ್ದು, ದಿಃ 18/08/2025 ರಂದು ಪೊಲೀಸರು ಅನಿಲ್ ಕುಮಾರ್ ರವರ ಮನೆಯಲ್ಲಿ ಕಳ್ಳತನ ಮಾಡಿದ ಆರೋಪಿತರನ್ನು ನಮ್ಮ ಮನೆಯ ಬಳಿ ಬಂದು ಅನಿಲ್ ಕುಮಾರ್ ರವರ ಮನೆಯಲ್ಲಿ ಕಳ್ಳತನ ಮಾಡಿದ ವಸ್ತುಗಳನ್ನು ನಿಮಗೆ ಮಾರಾಟ ಮಾಡಿರುವುದಾಗಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದು ಸದರಿ ವಸ್ತುಗಳನ್ನು ಮಹಜರು ಮೂಲಕ ಪಡೆಯಬೇಕಿರುತ್ತದೆ ಎಂದು ನನಗೆ ತಿಳಿಸಿ ವಸ್ತುಗಳನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ನಾನು ಗ್ಯಾಸ್ ಸಿಲಿಂಡರ್ ಮತ್ತು ಸೋಲಾರ್ ಪ್ಯಾನಲ್ ಹಾಜರುಪಡಿಸಿದ್ದು ಅವುಗಳನ್ನು ಮಹಜರು ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂದ ನಾನು ಈಗ ಓದಿ ಹೇಳಿದ ನಿಪಿ 25 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 25 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ ಃಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ